**ದಿನಾಂಕಃ 13.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ፥ 12 ರಿಂದ 24 ರ ಪ್ರತಿವಾದಿಯರನ್ನು ಮತ್ತು ಅವರ ಪರ ವಕೀಲರನ್ನು ಕೂಗಿಸಲಾಯಿತು. ಸದರಿಯವರು ಗೈರುಹಾಜರಿದ್ದು ಮತ್ತು ಸದರಿಯವರು ಪ್ರತಿವಾದ ಪತ್ರ ಸಲ್ಲಿಸದೇ ಇರುವುದರಿದ ಅವರ ಪರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**ಪಾಟೀ ಸವಾಲುಃ 25 ನೇ ಪ್ರತಿವಾದಿಪರ ಶ್ರೀ ವಾಯ್.ಹೆಚ್. ವಕೀಲರಿಂದಃ**

1 ನೇ ವಾದಿ ನನ್ನ ಅಣ್ಣನಾಗಬೇಕು. ಕುಟುಂಬದ ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ದಾವಾ ಆಸ್ತಿಯ ಸರ್ವೆ ನಂಬರ ನನಗೆ ಗೊತ್ತಿರುವುದಿಲ್ಲ. ಸದರಿ ಆಸ್ತಿಯ ಕ್ಷೇತ್ರ 04 ಎಕರೆ 40 ಗುಂಟೆ ಇರಬಹುದು. ದಾವಾ ಆಸ್ತಿಯ ಚಕ್ಕಬಂದಿ ಪೂರ್ವಕ್ಕೆ ವಾಲೀಕಾರ ಇವರ ಜಮೀನು, ಪಶ್ಚಿಮಕ್ಕೆ ವಾಲೀಕಾರ ಜಮೀನು, ಉತ್ತರಕ್ಕೆ ಆಲಹಾಳ ಇವರ ಜಮೀನು, ದಕ್ಷಿಣಕ್ಕೆ ಯಾರ ಜಮೀನು ಇದೆ ಅಂತಾ ನನಗೆ ಗೊತ್ತಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರು ನನ್ನ ಅಣ್ಣ ಮಕ್ಕಳು ಇರುತ್ತಾರೆ. ಸದರಿಯವರಿಗೆ ಆಸ್ತಿ ಹೇಗೆ ಬಂದಿರುತ್ತದೆ ಎಂದರೆ ಸಾಕ್ಷಿಯು ಮೊದಲು ನನ್ನ ತಂದೆಯ ಹೆಸರಿನಲ್ಲಿ ಇತ್ತು ನಂತರ 1 ರಿಂದ 3 ನೇ ಪ್ರತಿವಾದಿಯರ ಹೆಸರಿಗೆ ಬಂದಿರುತ್ತದೆ. 1 ರಿಂದ 3 ನೇ ಪ್ರತಿವಾದಿಯರು ಈಗಾಗಲೇ ಬೇರೆಯಾಗಿರುತ್ತಾರೆ ಎಂದರೆ ಸರಿಯಲ್ಲ. ಸುಮಾರು 16-20 ವರ್ಷಗಳಿಂದ 1 ರಿಂದ 3 ನೇ ಪ್ರತಿವಾದಿಯರೇ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. ಪಾಲುವಿಭಾಗ ಆದಾಗಿನಿಂದ ಸದರಿಯವರು ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರೇ ಕಬ್ಜದಲ್ಲಿ ಇರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಕಬ್ಜದಲ್ಲಿ ಇರುದರಿಂದ ನಾನು ದಾವೆ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಸದರಿಯವರು ತಮ್ಮ ಪಾಲಿಗೆ ಬಂದ ಆಸ್ತಿಯನ್ನು

25 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಾರಾಟಕ್ಕೆ ನಾನು ಒಪ್ಪಿಗೆ ನೀಡಿರುತ್ತೇನೆ ಎಂದರೆ ಸರಿಯಲ್ಲ. 25 ನೇ ಪ್ರತಿವಾದಿ ಮೇಲೆ ವಿನಾಕಾರಣ ನಾನು ದಾವೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಆಸ್ತಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಕಾನೂನು ಪ್ರಕಾರ ಉಪನೋಂದಣಾಧಿಕಾರಿ ಕಚೇರಿಯಲ್ಲಿ ಆಸ್ತಿ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನು ಎಷ್ಟು ಬೆಲೆ ಬಾಳುತ್ತದೆ ನನಗೆ ಗೊತ್ತಿಲ್ಲ. ವಿನಾಕಾರಣ 25 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಃ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.